# ಬೆಂಗಳೂರು ವಿಶ್ವವಿದ್ಯಾಲಯ

ಜ್ಞಾನಭಾರತಿ, ಬೆಂಗಳೂರು-560056

ಇಎಸ್‌ಟಿ-1/ಇ1 ಸುತ್ತೋಲೆ/2014/2022-23

ದಿನಾಂಕ: 19.11.2022

## ಸುತ್ತೋಲೆ

**ವಿಷಯ:** ಬೆಂಗಳೂರು ವಿಶ್ವವಿದ್ಯಾಲಯ, ಜ್ಞಾನಭಾರತಿ ಆವರಣದಲ್ಲಿ ಸ್ವಚ್ಛತಾ ಅಭಿಯಾನವನ್ನು ಹಮ್ಮಿಕೊಳ್ಳುವ ಬಗ್ಗೆ.

**ಉಲ್ಲೇಖ:** ಮಾನ್ಯ ಕುಲಪತಿಯವರ ಅನುಮೋದನೆ ದಿನಾಂಕ: 19.11.2022.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಬೆಂಗಳೂರು ವಿಶ್ವವಿದ್ಯಾಲಯ ಜ್ಞಾನಭಾರತಿ ಅವರಣದಲ್ಲಿ ಹರಡಿರುವ ತ್ಯಾಜ ವಸ್ತುಗಳು ಮತ್ತು ಇನ್ನಿತರ ಕೊಳಕು ವಸ್ತುಗಳನ್ನು ಸಂಗ್ರಹ ಮಾಡಲು ದಿನಾಂಕ: 22.11.2022 ರಂದು ಸ್ವಚ್ಛತ ಅಭಿಯಾನದ ಕಾರ್ಯಕ್ರಮವನ್ನು ಮಾನ್ಯ ಕುಲಪತಿಗಳು ಮತ್ತು ಕುಲಸಚಿವರ ನೇತೃತ್ವದಲ್ಲಿ ಹಮ್ಮಿಕೊಳ್ಳಲಾಗಿದೆ.

ಅದರಂತೆ, ದಿನಾಂಕ: 22.11.2022 ರಂದು ಮಂಗಳವಾರ ಬೆಳಗ್ಗೆ 11.00 ರಿಂದ ಮದ್ಯಾಹ್ನ 1.00 ರವರೆಗೆ ಸ್ವಚ್ಛತ ಅಭಿಯಾನದ ಕಾರ್ಯಕ್ರಮದಲ್ಲಿ ಬೆಂಗಳೂರು ವಿಶ್ವವಿದ್ಯಾಲಯದ ಎಲ್ಲಾ ಶಿಕ್ಷಕ/ ಶಿಕ್ಷಕೇತರ ನೌಕರರು ಮತ್ತು ದಿನಗೂಲಿ /ಹೊರಗುತ್ತಿಗೆ ನೌಕರರು ಮತ್ತು ಸ್ವಚ್ಛತಾ ಸಿಬ್ಬಂದಿ/ಗೃಹರಕ್ಷದಳ ಹಾಗೂ ವಿಶ್ವವಿದ್ಯಾಲಯದ ಎಲ್ಲಾ ಸ್ನಾತಕ ಮತ್ತು ಸ್ನಾತಕೋತ್ತರ ವಿಭಾಗಗಳ ವಿದ್ಯಾರ್ಥಿಗಳು ಪಾಲ್ಗೊಳುವಂತೆ ಸೂಚಿಸಲಾಗಿದೆ.

ಮುಂದುವರೆದು, ಬೆಂಗಳೂರು ವಿಶ್ವವಿದ್ಯಾಲಯದ ಎಲ್ಲಾ ಶಿಕ್ಷಕ/ ಶಿಕ್ಷಕೇತರ ನೌಕರರು ಮತ್ತು ದಿನಗೂಲಿ /ಹೊರಗುತ್ತಿಗೆ ನೌಕರರು ಹಾಗೂ ಸ್ವಚ್ಛತಾ ಸಿಬ್ಬಂದಿ/ಗೃಹರಕ್ಷದಳ ಹಾಗೂ ಬೆಂಗಳೂರು ವಿಶ್ವವಿದ್ಯಾಲಯದ ಸ್ನಾತಕ ಮತ್ತು ಸ್ನಾತಕೋತ್ತರ ವಿಭಾಗಗಳ ವಿದ್ಯಾರ್ಥಿಗಳು ಬೆಳಗ್ಗೆ 11.00 ಘಂಟೆಗೆ ಜ್ಞಾನಬಾರತಿ ಆಡಳಿತ ಕಛೇರಿ ಮುಂಭಾಗದಲ್ಲಿ ಸೇರತಕ್ಕದ್ದು. ಮಾನ್ಯ ಕುಲಪತಿಗಳು ಮತ್ತು ಕುಲಸಚಿವರ ಹಿತ ನುಡಿಯ ನಂತರ ಸ್ವಚ್ಛತಾ ಅಭಿಯಾನದ ಕಾರ್ಯಕ್ರಮವನ್ನು ಈ ಸುತ್ತೋಲೆಯ ಜೊತೆ ಲಗತ್ತಿಸಿರುವ ಪಟ್ಟಿಯಂತೆ ಪ್ರಾರಂಭಿಸುವಂತೆ ತಿಳಿಸಲಾಗಿದೆ

**ವಿಶೇಷ ಸೂಚನೆ:** ಕಾರ್ಯಕ್ರಮ ಮುಗಿದ ನಂತರ ಕಛೇರಿ/ವಿಭಾಗಗಳಿಗೆ ಸಿಬ್ಬಂದಿಗಳು ಕರ್ತವ್ಯಕ್ಕೆ ಹಾಜರಾಗಲು ಸೂಚಿಸಲಾಗಿದೆ.

**ಆದೇಶದ ಮೇರೆಗೆ**

**ಕುಲಸಚಿವರು**

ಗೆ,

ವಿಶ್ವವಿದ್ಯಾಲಯದ ಎಲ್ಲಾ ಅಧಿಕಾರಿ/ಸಿಬ್ಬಂದಿಗಳು ಮತ್ತು ಹೊರಗುತ್ತಿಗೆ/ ದಿನಗೂಲಿ ನೌಕರರು ಹಾಗೂ ಸ್ನಾತಕ ಮತ್ತು ಸ್ನಾತಕೋತ್ತರ ವಿಭಾಗಗಳ ವಿದ್ಯಾರ್ಥಿಗಳು, ಬೆಂ.ವಿ.ಬೆಂ

**ಪ್ರತಿಗಳು:**

1. ವಿತ್ತಾಧಿಕಾರಿಯವರು, ಹಣಕಾಸು ವಿಭಾಗ, ಬೆಂ.ವಿ.ಬೆಂ
2. ಕುಲಸಚಿವರು (ಮೌಲ್ಯಮಾಪನ), ಪರೀಕ್ಷಾ ವಿಭಾಗ, ಬೆಂ.ವಿ.ಬೆಂ.
3. ಕುಲಪತಿಗಳ/ ಕುಲಸಚಿವರ ಆಪ್ತ ಕಾರ್ಯದರ್ಶಿಯವರು, ಬೆಂ.ವಿ.ಬೆಂ,
4. ಸಹಾಯಕ ಕುಲಸಚಿವರು, ಸಂಪತ್ತಿ ವಿಭಾಗ, ಬೆಂ.ವಿ.ಬೆಂ.- ಇವರು **Gloves, Mask, Garbage bags , Handwash** ಮತ್ತು **SanitiZer** ಗಳನ್ನು ಸುಮಾರು 1,000 ಜನರಿಗೆ ವಿತರಿಸುವ ವ್ಯವಸ್ಥೆ ಮಾಡಲು ಸೂಚಿಸಿದೆ.
5. ಸಿಸ್ಟಮ್ ಅನಾಲಿಸ್ಟ್, ಇ-ಆಡಳಿತ ವಿಭಾಗ, ಬೆಂ.ವಿ.ಬೆಂ.
6. ಕಛೇರಿ ಪ್ರತಿ.

# ಬೆಂಗಳೂರು ವಿಶ್ವವಿದ್ಯಾಲಯ

ಜ್ಞಾನಭಾರತಿ, ಬೆಂಗಳೂರು-560056

ಬೆಂಗಳೂರು ವಿಶ್ವವಿದ್ಯಾಲಯ, ಜ್ಞಾನಭಾರತಿ ಆವರಣದಲ್ಲಿ ಸ್ವಚ್ಛತ ಅಭಿಯಾನದ ಕಾರ್ಯಕ್ರಮದ ವಿವರಗಳು ಈ ಕೆಳಕಂಡಂತೆ ಇರುತ್ತದೆ.

| ಕ್ರಮ ಸಂಖ್ಯೆ | ವಿಭಾಗಗಳ ಸಿಬ್ಬಂದಿಗಳು/ವಿದ್ಯಾರ್ಥಿಗಳು | ಸ್ವಚ್ಛ ಮಾಡುವ ಸ್ಥಳಗಳು |
|---|---|---|
| 1. | ಮೈಕ್ರೋ ಬಯಾಲಜಿ ಮತ್ತು ಬಯೋ ಟೆಕ್ನಾಲಾಜಿ ವಿಭಾಗಗಳು | ಗಾಂಧಿ ಭವನದ ಸುತ್ತಮುತ್ತಲಿನ ಆವರಣ ಮತ್ತು ನ್ಯಾಕ್ ಕಛೇರಿಯ ವರೆಗಿನ ರಸ್ತೆ. |
| 2. | ದೃಶ್ಯ ಕಲಾ ವಿಭಾಗ ಮತ್ತು ವಾಣಿಜ್ಯ ವಿಭಾಗ | ದೃಶ್ಯ ಕಲಾ ವಿಭಾಗ, ವಾಣಿಜ್ಯ ವಿಭಾಗ, ಸಿ.ಬಿ.ಎಸ್.ಎಂ.ಎಸ್, ಮೈಕ್ರೋ ಬಯಾಲಜಿ ಮತ್ತು ಬಯೋ ಟೆಕ್ನಾಲಜಿ ವಿಭಾಗಗಳ ಕಟ್ಟಡದ ಸುತ್ತಮುತ್ತಲಿನ ಆವರಣ. |
| 3. | ವಿವಿ ಕಾನೂನು ಕಾಲೇಜು | ವಿವಿ ಕಾನೂನು ಕಾಲೇಜು, ಗಣೇಶ ದೇವಸ್ಥಾನ, ಪೋಲಿಸ್ ಠಾಣೆ ಮತ್ತು ಕಮ್ಯೂನಿಟಿ ಹಾಲ್ ಕಟ್ಟಡದ ಸುತ್ತಮುತ್ತಲಿನ ಆವರಣ. |
| 4. | ಆಡಳಿತ ಕಛೇರಿ | ಆಡಳಿತ ಕಛೇರಿ ಮತು ಕ್ಯಾಂಟೀನ್ ಕಟ್ಟಡದ ಸುತ್ತಮುತ್ತಲಿನ ಆವರಣ. |
| 5. | ಪ್ರಸಾರಂಗ ಮತ್ತು ವಿವಿ ಮುದ್ರಣಾಲಯ ಮತ್ತು ಗಣಿತಶಾಸ್ತ್ರ ವಿಭಾಗ | ಪ್ರಸಾರಂಗ ಮತ್ತು ವಿವಿ ಮುದ್ರಣಾಲಯ ಮತ್ತು ಗಣಿತಶಾಸ್ತ್ರ ವಿಭಾಗ ಕಟ್ಟಡದ ಸುತ್ತಮುತ್ತಲಿನ ಆವರಣ. |
| 6. | ಪರೀಕ್ಷ ವಿಭಾಗ | ಪರೀಕ್ಷ ವಿಭಾಗ ಕಟ್ಟಡದ ಸುತ್ತಮುತ್ತಲಿನ ಆವರಣ. |
| 7. | ಮನೋ ಶಾಸ್ತ್ರ ವಿಭಾಗ, ಎಂ.ಸಿ.ಎ ಮತ್ತು ಜೀವ ವಿಜ್ಞಾನ ವಿಭಾಗ | ಮನೋ ಶಾಸ್ತ್ರ ವಿಭಾಗ, ಎಂ.ಸಿ.ಎ ಮತ್ತು ಜೀವ ವಿಜ್ಞಾನ ವಿಭಾಗ ಕಟ್ಟಡದ ಸುತ್ತಮುತ್ತಲಿನ ಆವರಣ. |
| 8. | ಸ್ನೇಹ ಭವನದಲ್ಲಿನ ವಿಭಾಗಗಳು | ಸ್ನೇಹ ಭವನದಲ್ಲಿನ ವಿಭಾಗಗಳ ಕಟ್ಟಡದ ಸುತ್ತಮುತ್ತಲಿನ ಆವರಣ. |
| 9. | ಭೌತಶಾಸ್ತ್ರ ವಿಭಾಗ, ಸಂಖ್ಯಾಶಾಸ್ತ್ರ ವಿಭಾಗ ಮತ್ತು ಸಮಾಜಶಾಸ್ತ್ರ ವಿಭಾಗಗಳು | ಭೌತಶಾಸ್ತ್ರ ವಿಭಾಗ, ಸಂಖ್ಯಾಶಾಸ್ತ್ರ ವಿಭಾಗ ಮತ್ತು ಸಮಾಜಶಾಸ್ತ್ರ ವಿಭಾಗಗಳ ಕಟ್ಟಡದ ಸುತ್ತಮುತ್ತಲಿನ ಆವರಣ. |
| 10. | ಭೂಗರ್ಭ ಶಾಸ್ತ್ರ ವಿಭಾಗ | ಭೂಗರ್ಭಶಾಸ್ತ್ರ ವಿಭಾಗ ಮತ್ತು ಪ್ರಾಣಿಶಾಸ್ತ್ರ ವಿಭಾಗಗಳ ಕಟ್ಟಡದ ಸುತ್ತಮುತ್ತಲಿನ ಆವರಣ. |
| 11. | ಎಲೆಕ್ಟ್ರಾನಿಕ್ಸ್ ಸೈನ್ಸ್ ವಿಭಾಗ, ಪ್ರಾಣಿಶಾಸ್ತ್ರ ವಿಭಾಗ ಮತ್ತು ಸಸ್ಯಶಾಸ್ತ್ರ ವಿಭಾಗಗಳು | ಎಲೆಕ್ಟ್ರಾನಿಕ್ಸ್ ಸೈನ್ಸ್ ವಿಭಾಗ, ಮತ್ತು ಸಸ್ಯಶಾಸ್ತ್ರ ವಿಭಾಗಗಳಿಂದ ಗಾಂಧಿ ಭವನ ರಸ್ತೆ ಮತ್ತು ಭಾರತೀಯ ಕ್ರೀಡ ಪ್ರಾಧಿಕರದ ಗೇಟ್ ರವರೆಗಿನ ಸುತ್ತಮುತ್ತಲಿನ ಆವರಣ. |
| 12. | ಡಿಡಿಎಂ, ತೆಲುಗು ವಿಭಾಗ, ಸಂಸ್ಕೃತ ವಿಭಾಗ, ಹಿಂದಿ ವಿಭಾಗ, ಉರ್ದು ವಿಭಾಗಗಳು | ಡಿಡಿಎಂ, ತೆಲುಗು ವಿಭಾಗ, ಸಂಸ್ಕೃತ ವಿಭಾಗ, ಹಿಂದಿ ವಿಭಾಗ, ಉರ್ದು ವಿಭಾಗ, ಇತಿಹಾಸ ವಿಭಾಗ, ರಾಜ್ಯಶಾಸ್ತ್ರ ವಿಭಾಗ, ಸಮಾಜಶಾಸ್ತ್ರ ವಿಭಾಗ, ಅರ್ಥಶಾಸ್ತ್ರ ವಿಭಾಗ, ಕಟ್ಟಡ ಸುತ್ತಮುತ್ತಲಿನ ಆವರಣ ಮತ್ತು ಮರಿಯಪ್ಪನಪಾಳ್ಯ ಗೇಟ್ ವರೆಗೂ ಹಾಗೂ |

| | | |
|---|---|---|
| 13. | ಇತಿಹಾಸ ವಿಭಾಗ, ರಾಜ್ಯಶಾಸ್ತ್ರ ವಿಭಾಗ, ಸಮಾಜಶಾಸ್ತ್ರ ವಿಭಾಗ, ಅರ್ಥಶಾಸ್ತ್ರ ವಿಭಾಗ, ಬಿಎ&ಬಿಎಸ್‌ಸಿ ಆನರ್ಸ್, ಹೆಚ್.ಆರ್.ಡಿ ಮತ್ತು ಇಂಗ್ಲೀಷ ವಿಭಾಗಗಳ ಸುತ್ತಮುತ್ತಲಿನ ಆವರಣ. | ಪಿ.ಜಿ.ಹಾಸ್ಟಲ್-2, ಪಿ.ಹೆಚ್.ಡಿ ಹಾಸ್ಟಲ್, ಸಿವಿಲ್ ಇಂಜಿನಿಯರಿಂಗ್ ವಿಭಾಗ ಮತ್ತು ಪಿ.ಜಿ. ಹಾಸ್ಟಲ್-5 ಮತ್ತು ಸುತ್ತಮುತ್ತಲಿನ ಆವರಣ. |
| 14. | ಸಿವಿಲ್ ಇಂಜಿನಿಯರಿಂಗ್ ವಿಭಾಗ ಮತ್ತು ಪಿ.ಜಿ-5 ಹಾಸ್ಟೆಲ್ | ಸಿವಿಲ್ ಇಂಜಿನಿಯರಿಂಗ್ ವಿಭಾಗ ಮತ್ತು ಪಿ.ಜಿ-5 ಹಾಸ್ಟೆಲಿನ ಸುತ್ತಮುತ್ತಲಿನ ಆವರಣ. |
| 15. | ವಾಸ್ತುಶಿಲ್ಪ ವಿಭಾಗ ವಿವಿ ಗ್ರಂಥಾಲಯ | ವಿವಿ ಗ್ರಂಥಾಲಯದ ಸುತ್ತಮುತ್ತಲಿನ ಆವರಣ. |
| 16. | ಬೈಯೋ ಪಾರ್ಕ ಮತ್ತು ತೋಟಗಾರಿಕೆ ಇಲಾಖೆ | ಲೇಡಿಸ್ ಹಾಸ್ಟಲ್ (old & new), ಕುಲಪತಿಗಳ ಅತಿಥಿ ಗೃಹ ಮತ್ತು ಅಗ್ನಿ ಶಾಮಕ ಠಾಣೆಯ ಸುತ್ತಮುತ್ತಲಿನ ಆವರಣ. |
| 17. | ಎನ್.ಎಸ್.ಎಸ್ ಭವನ | ಆರೋಗ್ಯ ಕೇಂದ್ರ, ಶಾಪಿಂಗ್ ಕಾಂಪ್ಲೇಕ್ಸ್ ಅಂಬೇಡ್ಕರ್ ಭವನ ಮತ್ತು ವಿಶ್ವವಿದ್ಯಾಲಯದ ಮುಖ್ಯದ್ವಾರದವರೆಗೆ |
| 18. | ಬಿಪಿಇಡಿ ಮತ್ತು ಎಂಪಿಇಡಿ ಕಾಲೇಜು | ಈಜು ಕೊಳ ರಸ್ತೆಯಿಂದ ಪರೀಕ್ಷಾ ಪೂರ್ವ ತರಬೇತಿ ಕೇಂದ್ರ ಮತ್ತು ಬಿ.ಸಿ.ಎಂ ಹಾಸ್ಟಲ್‌ನ ಸುತ್ತಮುತ್ತಲಿನ ಆವರಣ ಹಾಗೂ ಕೆರೆಯ ಆವರಣ. |

**ವಿಶೇಷ ಸೂಚನೆ:** ಆಯಾ ವಿಭಾಗಗಳ ಮುಖ್ಯಸ್ಥರುಗಳು ಗೃಹ ರಕ್ಷಕ ದಳ ಹಾಗೂ ಸ್ವಚ್ಛತಾ ಸಿಬ್ಬಂದಿಗಳ ನೆರವಿನೊಂದಿಗೆ ಕಾರ್ಯಕ್ರಮವನ್ನು ಯಶ್ವಸಿಗೊಳಿಸಲು ಸೂಚಿಸಲಾಗಿದೆ.

**ಕುಲಸಚಿವರು**